

ಹೋಗಲ್ವಾ? ಹುಚ್ಚರಿಗೆ ಶಿಕ್ಷೆ ಕೊಡೋ ವಿಧಾನವೇ ಹೊಡೆಯೋದು.

ಆಫೀಸಿನಲ್ಲಿ ಇಡೀ ದಿನ ಅಸಿತ್ ಮನೆಯ ಹತ್ತಿರ ಸುತ್ತಾಡುತ್ತಿರುವ ಅವನ ವಿಚಾರವೇ ಚರ್ಚೆಯಾಯಿತು. ಹಿಂದೆ ಈ ರೀತಿ ನಡೆದ ಘಟನೆಗಳ ಬಗ್ಗೆ ಗಂಭೀರ ವಾದವಿವಾದ ನಡೆಯಿತು. ಎಲ್ಲರ ಮಾತುಕತೆಗಳಲ್ಲೂ ಆ ರೀತಿಯ ವಿಷಯವೇ ಸುಳಿದಾಡಿತು. ಇನ್ನೂ ಅನೇಕ ಭಯಂಕರ ಸುದ್ದಿ ಸಮಾಚಾರಗಳು ವಿನಿಮಯವಾದವು.

ಆತಂಕದಿಂದಲೇ ಮನೆಗೆ ಮರಳಿದ ಅಸಿತ್. ಸದ್ಯ, ಅವನು ಎಲ್ಲೂ ಕಾಣಿಸಿಕೊಳ್ಳಲಿಲ್ಲ. ಅವನು ಹುಚ್ಚನೇ ಇರಬೇಕು, ಅವನ ಲಹರಿ ಅವನನ್ನು ಬೇರೆ ಕಡೆ ಎಳೆದೊಯ್ದಿರಬೇಕು.

ಆದರೆ, ಮನೆಯೊಳಗೆ ಕಾಲಿಟ್ಟನೋ ಇಲ್ಲವೋ ನಿಮಾಯ್ ಹೇಳಿದ ವಿಷಯ ಕೇಳಿ ಅಸಿತ್‌ನ ರೋಮಗಳು ನಿಮಿರಿ ನಿಂತವು.

ಅವನು ಮಧ್ಯಾಹ್ನ ಬಂದಿದ್ದನಂತೆ, ಸುಲತಾ ದೀದಿ ಅವನನ್ನ ಬಾಗಿಲ ಹತ್ತಿರ ಕೂರಿಸಿಕೊಂಡು ಗಂಟೆಕಾಲ ಮಾತಾಡಿದಳಂತೆ. ಟೀ ಬ್ರೆಡ್ಡು ಎಲ್ಲ ಕೊಟ್ಟಳಂತೆ.

ಅಸಿತ್ ಕೈಕಾಲು ಮುಖವನ್ನು ತೊಳೆಯಲೂ ಹೋಗದೆ ಕಿರುಚಿದ, "ಸುಲತಾ!"

ಸುಲತಾ ಎದುರಿಗೆ ಬಂದು ನಿಂತಳು. ಅವಳು ನಿಮಾಯ್‌ನ ಕಡೆ ದೃಷ್ಟಿ ಹರಿಸಿದಳು. ಆ ನೋಟ ಹೇಗಿತ್ತೆಂದರೆ ಸತ್ಯಯುಗವಾಗಿದ್ದರೆ ನಿಮಾಯ್ ಸುಟ್ಟು ಹೋಗಬೇಕಿತ್ತು, ಕಲಿಯುಗವಾದ್ದರಿಂದ ಬದುಕಿಕೊಂಡ!

ಅಸಿತ್ ಕೇಳಿದ, "ಏನ್ ಸಮಾಚಾರ?"

ಸುಲತಾ ಬಹಳ ಮುಗ್ಧವಾಗಿ ಕೇಳಿದಳು, "ಯಾವ ಸಮಾಚಾರ ದಾದಾ?"